Founded 1917 ॥ ಶ್ರೀ ॥ Regd No- M 1299

ಸತ್ಯವಾದಿ

ಆರಮನೆ ಸ್ಥಿರಸ್ಥೇದಾರ್ ಎಂ. ಪಿ. ಸುಬ್ಬರಾಯರಿಂದ ಪ್ರತಿಷ್ಠಿತಪಾದುದು Proprietors— Satyavadi Ltd, Mysore

ಸಂಪುಟ ೨೫] [ಸಂಚಿಕೆ ೧೫ 10-12-41 ಬಿಡಿ ಪ್ರತಿ ೪ ಪೈ

SATYAVADI

From 13-12-41

Morning Shows 13th & 14 th

NEW OPERA TALKIES

(THE BEAUTY SPOT OF MYSORE)

She was the golden girl who led the way to glamour for millions!
DRAMA as great as their DANCE
THE STORY OF
VERNON AND IRENE CASTLE
STARRING
FRED ASTAIRE
GINGER ROGERS
with
EDNA MAY OLIVER
WALTER BERNNAN
LEW FIELDS
ETIENNE GIRARDOT
JANET BEECHER
The true love story of the dancing idols of an exciting yesterday . . . Including a great Cavalcade of the Dances that created a world-wide sensation!
RKO RADIO Picture
Backgrounded by the big song hits of the past 20 years!

PANDRO S. BERMAN in charge of production. Directed by H. C. POTTER. Produced by GEORGE HAIGHT Screen Play by Richard Sherman. Adaptation by Oscar Hammerstein II and Dorothy Yost.

VERNON & IRENE CASTLE

DIRECTED BY H·C·POTTER

R. K. O. RADIO PICTURES

— C A S T —

Vernon Castle—Fred Astaire

Irene Castle— Ginger Rogers

C h a r l i e— Sonny Lamount

and others.

WEEKLY NEWS MAGAZINE

Famous comedy skit — Thrill & romance from start to finish

Fabulous Treasury of Dazzling Entertainment !

DRAMATIC WILDFIRE—DANCING TO HEAVEN—Music in your heart

QUALITY MILK & MILK PRODUCTS

From Citizens Dairy, Old Post Office Road, Mysore.— Telephone : 492.

ಪೆನುಕೊಂಡದಲ್ಲಿ

ಏಪ್ರಿಲ್‌ನಿಂದ ಆಗಸ್ಟ್ ಮಧ್ಯದವರೆಗೆ ನಡೆದ

ಶ್ರೀ ಸಾಯಿಬಾಬಾರವರ ಪೂಜೆ

ಲೇಖಕರು— ಎಸ್. ಸುಬ್ಬರಾವ್, ಬಿ. ಎ.
ಫಸ್ಟ್ ಗ್ರೇಡ್ ಪ್ಲೀಡರ್, ಗೂಟಿ.

ಶ್ರೀ ಎಸ್. ಬಿ. ಕೇಶವಯ್ಯನವರ ಜನ್ಮ ಸ್ಥಳ ಅನಂತಪುರ ಜಿಲ್ಲೆ. ಇವರು 1938 ನೇ ಇಸ್ವಿಯಲ್ಲಿ ಒಂದು ತಿಂಗಳು ದಕ್ಷಿಣ ದೇಶದಲ್ಲಿ ತೀರ್ಥಯಾತ್ರೆಯನ್ನು ಮಾಡಿದರು. ಅಂದಿನಿಂದ ಆತನಿಗೆ ಭಗವಂತನಲ್ಲಿ ಭಕ್ತಿಯು ಹೆಚ್ಚಿರುತ್ತದೆ. ಆತನ ವಯಸ್ಸು 40. ಪೆನುಕೊಂಡದಲ್ಲಿ ಸಬ್‌ರಿಜಿಸ್ಟ್ರಾರ್ ಪದವಿಯನ್ನು ಅಲಂಕರಿಸಿರುವರು. ಸ್ಥಳಮಾರ್ಗದಲ್ಲಿ ನಡೆಯುವವರಲ್ಲಿ ಹೆಸರನ್ನು ಪಡೆದಿರುವರು. ಶ್ರೀ ಸಾಯಿ ಬಾಬಾರವರ ಭಕ್ತರಲ್ಲಿ ಇವರು ಒಬ್ಬರು. 1–7–39 ರಲ್ಲಿ ಇವರಿಗೆ ಅವರ ಸಂಗಡಿಗರಾದ ಲಾಯರುಗಳೊಬ್ಬರಿಂದ ಬಾಬಾರವರ ವಿಚಾರವು ತಿಳಿಯಬಂದು. ಅಂದಿನಿಂದ ಬಾಬಾರವರ ಪರಮಭಕ್ತರಾಗಿರುವರು. ಶ್ರೀ ಬಾಬಾರವರ ಪಾವನಭೂಮಿಯಾದ ಷಿರ್ಡಿ ಗ್ರಾಮಕ್ಕೆ 6 ತಿಂಗಳುಗಳೊಳಗಾಗಿ ಮೂರು ಬಾರಿ ಯಾತ್ರಾರ್ಥಿಗಳಾಗಿ ಹೋಗಿಬಂದಿರುವರು. ಸಾಯಿ ಬಾಬಾರವರ ಅನುಗ್ರಹವನ್ನು ಇವರು ಪೂರ್ಣರೀತಿಯಲ್ಲಿ ಪಡೆದಿರುವರು. ಈಚೆಗೆ ಇವರು ಅದ್ಭುತ ಶಕ್ತಿಗಳನ್ನು ಪ್ರದರ್ಶಿಸುತ್ತಿರುವರು. ಕೇವಲ ಸ್ಪರ್ಶಮಾತ್ರದಿಂದಲೇ ವ್ಯಾಧಿಗಳನ್ನು ಗುಣಪಡಿಸುವರು. ಇತರರ ವ್ಯಾಧಿಗಳನ್ನು ತಮ್ಮ ದೇಹದೊಳಕ್ಕೆ ಆಕರ್ಷಿಸಿಕೊಳ್ಳುವರು. 'ಉಧಿ' ಯಿಂದಲೂ ಗುಣಪಡಿಸುವರು. ಪ್ರತಿ ಗುರುವಾರವೂ ಇವರು ಪೆನುಕೊಂಡದಲ್ಲಿಯ ತಮ್ಮ ಮನೆಯಲ್ಲಿ ಬಾಬಾರವರ ಪೂಜೆಯನ್ನು ಮಾಡುವರು. ಪೂಜಾನಂತರ ಭಕ್ತರೆಲ್ಲರೂ ಬಾಬಾರವರ ಪಾದಗಳಿಗೆರಗಿ ಅವರ ಆಶೀರ್ವಾದವನ್ನು ಪಡೆಯುವ ಅವಕಾಶವಿರುತ್ತೆ. ಆ ಪೂಜೆಗೆ ಸಮಾರು ಮುನ್ನೂರು ನಾನೂರು ಜನರು ಬರುವರು; ಕೊನೆಯಪಕ್ಷ 200 ತೆಂಗಿನ ಕಾಯಿಗಳು ಅರ್ಪಿಸಲ್ಪಡುವವು. ಸುಮಾರು 2 ಸೇರಿನಷ್ಟು ಸಕ್ಕರೆಯು ಬಾಬಾರವರಿಗೆ ನಿವೇದನ ಮಾಡಲ್ಪಟ್ಟು ಅಲ್ಲಿ ನೆರೆದಿರುವವರಿಗೆಲ್ಲಾ ಹಂಚಲ್ಪಡುವುದು. ಭಕ್ತರ ಸಂಖ್ಯೆಯು ಹೆಚ್ಚಿದರೂ, ಎಲ್ಲರಿಗೂ ಹಂಚಿದ ನಂತರ ಕೊನೆಯ ಪಕ್ಷ 12 ಮಂದಿ ಭಕ್ತರಿಗೆ ಸಾಕಾಗುವಷ್ಟು ಸಕ್ಕರೆಯು ತಟ್ಟೆಯಲ್ಲಿ ವಿುಕ್ಕಿರುತ್ತದೆ. ಭಕ್ತರು ಪ್ರಶ್ನೆಗಳಿಗೆ ಉತ್ತರಕೊಡುವ ಕಾಲದಲ್ಲಿ ಅವರ ವ್ಯೋಲೆ ಬಾಬಾರವರು ಅವೇಶವಾಗುತ್ತಾರಾದ್ದರಿಂದ 'ಬಾಹ್ಯಪ್ರಜ್ಞೆಯು ಅವರಿಗಿರುವುದಿಲ್ಲ. ಬಾಬಾರನೇ ಅವರ ಮುಖೇನ ಬೇಕಾದ ಪ್ರಶ್ನೆಗಳಿಗೆ ಸದುತ್ತರಗಳನ್ನು ಕೊಡುತ್ತಿರುತ್ತಾರೆ. ಸ್ವತಃ ಆ ಸಮಯಕ್ಕೆ ಬರಲಾರದ ಭಕ್ತರು ತಮ್ಮ ಕಷ್ಟಗಳ ಪರಿಹಾರಕ್ಕೆ ಮಾರ್ಗವನ್ನು ತಿಳಿಸಲು ಪತ್ರಗಳನ್ನು ಬರೆದು ಕಳುಹಿಸುವರು. ಈ ಕಾಗದಗಳು ಬಾಬಾರವರ ಸಮ್ಮುಖದಲ್ಲಿಡಲ್ಪಡುವುವು. ಅವರ ಉತ್ತರವನ್ನು ಪಡೆದು, ಆ ವಿಚಾರಗಳು ತಡೆಯಿಲ್ಲದೇ ಪೃಚ್ಛಕರಿಗೆ ತಿಳಿಸಲ್ಪಡುವವು. ಬಾಬಾರವರ ಅಜ್ಞೆಯಿಲ್ಲದೆ ಸಬ್ ರಿಜಿಸ್ಟ್ರಾರ್‌ರು ಯಾವದೊಂದು ಕಾರ್ಯವನ್ನೂ ಮಾಡುವದಿಲ್ಲ. ಈ ಕೆಳಗಿನ ಅದ್ಭುತ ನಿದರ್ಶನಗಳು ಈ ವಿಷಯವನ್ನು ಸ್ಪಷ್ಟೀಕರಿಸುತ್ತದೆ –

1. ಪೆನುಗೊಂಡದ ಪ್ಲೀಡರಾದ ಶ್ರೀ ಕರುಡಿ ರಂಗಾರಾವ್, ಬಿ. ಎ., ಬಿ. ಎಲ್., ಲಾಯರ್ರವರು, ಇನ್ನು ಗುಣವಾಗುವುದಿಲ್ಲವೆಂಬ ಭಾವನೆಯಿಂದ ಅಸ್ವಸ್ಥವಾಗಿದ್ದ 2 ವರ್ಷ ವಯಸ್ಸಿನ ತಮ್ಮ ತಂಗಿಯ ಗಂಡು ಮಗುವಿನ ಶರೀರವನ್ನು ಹೊರಗೆ ಇಟ್ಟ ತರುವಾಯ ಸಬ್ ರಿಜಿಸ್ಟ್ರಾರ್ರನವರಿಗೆ ತಿಳಿಸಿದರು. ಈ ಮಗುವು ಬಾಬಾರವರ ರಕ್ಷಣೆಗೆ ಬಂದಂದಿನಿಂದ ದಿನಂ ಪ್ರತಿ 'ಉಧಿ' ಯು ಕೊಡಲ್ಪಡುತ್ತಿತ್ತು. ಈ ಸಮಯದಲ್ಲಿ ಸಬ್ ರಿಜಿಸ್ಟರರು ಕೆರೆಯಲ್ಲಿ ತಮ್ಮ ಸ್ನೇಹಿತರೊಂದಿಗಿದ್ದರು. ಸಬ್‌ರಜಿಸ್ಟ್ರಾರರು ಬಾಬಾರವರನ್ನು ಪ್ರಾರ್ಥಿಸಿ, ಮಗುವನ್ನು ಬಾಬಾರವರ ಪಠವ ಮುಂದೆ (ದ್ವಾರಕಾಮಾಯಿ) ಇಟ್ಟರುವಂತೆ ಶ್ರೀ ರಂಗರಾಯರಿಗೆ ತಿಳಿಸಿದರು. ಇಷ್ಟು ಹೇಳಿದೊಡನೆಯೇ ಮಗುವು ಎದ್ದು ಕೂತುಕೊಂಡಿತು ಅಂದಿನಿಂದ ಆ ಮಗುವು ದಿನೇ ದಿನೇ ಆರೋಗ್ಯವನ್ನು ಹೊಂದುತ್ತಿದೆ.

2 ಸೇಲಂ ಪ್ಲೀಡರರಾದ ಶ್ರೀ ವೆಂಕಟರಮಣ ರಾವ್, ಬಿ.ಎ., ಬಿ.ಎಲ್., ರವರು ನಾಲ್ಕೂವರೆ ವರ್ಷಗಳಿಂದ ಪಚನೇಂದ್ರಿಯ ಸಂಬಂಧವಾದ ವ್ಯಾಧಿಯಿಂದ ನರಳುತ್ತಿದ್ದರು. ಆತನು ಊಟಮಾಡುವುದೇತಡ ಎಲ್ಲವೂ ವಾಂತಿಯಾಗುತ್ತಿತ್ತು. ಅವರು ಮಂತ್ರಾಲಯಕ್ಕೆ ಹೋಗಿ ಅಲ್ಲಿ 40 ದಿನಗಳ ಕಾಲ ಪೂಜೆಪುನಸ್ಕಾರಗಳನ್ನು ಮಾಡಿದರು. ಎಲ್ಲಾ ಬಗೆಯ ಚಿಕಿತ್ಸೆಗಳನ್ನೂ ಮಾಡಿಕೊಂಡರು. ಗುಣವಾಗದೆ ಕೊನೆಗೆ ಪೆನುಕೊಂಡದ ಪ್ಲೀಡರ್* ಶ್ರೀ ಬಿ. ವಿ. ವಿ. ರಾಮಕೃಷ್ಣ ರವರ ಮೂಲಕ ಸಬ್‌ರಿಜಿಸ್ಟ್ರಾರ್‌ರರ ಸಹಾಯವನ್ನು ಕೋರಿ ಅಲ್ಲಿ ಒಂದು ವಾರದವರೆಗೂ ಇದ್ದರು. ಸೇಲಂನಲ್ಲಿಯ ಅವರ ಮನೆಗೆ ಒಂದು ಕಪ್ಪು ನಾಯಿಯು ಬಂದು ಅವರು ಕೊಡುವ ಆಹಾರವನ್ನು ಸ್ವೀಕರಿಸಿದಲ್ಲಿ 33 ದಿನಗಳೊಳಗಾಗಿ ವ್ಯಾಧಿಯು ಗುಣವಾಗುವುದಾಗಿ ಬಾಬಾರವರು ಸಬ್ ರಿಜಿಸ್ಟ್ರಾರರಿಗೆ ತಿಳಿಸಿದರು. ಅವರು ತಿಳಿಸಿದ್ದಂತೆಯೇ ಕಪ್ಪು ನಾಯಿಯು ಬಂದು ಆಹಾರವನ್ನು ಸೇವಿಸಿತು. ವ್ಯಾಧಿಯು ತಿಳಿಸಿದ್ದಂತೆಯೇ 33 ದಿನಗಳಲ್ಲಿ ಗುಣವಾಯಿತು. ಸಬ್ ರಿಜಿಸ್ಟ್ರಾರ್‌ರವರು 3–4 ದಿನಗಳು ಇವರ ವ್ಯಾಧಿಯಿಂದ ನರಳಿ ನಂತರ ಗುಣಹೊಂದಿದರು.

ಅನಂತಪುರದ ಅಡ್ವೊಕೇಟಂತಾದ ಶ್ರೀ ಮಲ್ಲಾರೆಡ್ಡಿ, ಬಿ.ಎ., ಬಿ.ಎಲ್., ರವರಿಗೆ ತಲೆಯ ಮತ್ತು ಮುಖದ ಎಡಪಾರ್ಶ್ವದಲ್ಲಿ ಒಂದು ಗುಳ್ಳೆಯಿತ್ತು. ಅದರ ಚಿಕಿತ್ಸೆಗಾಗಿ ಪೆನುಕೊಂಡಾಕ್ಕೆ ಬಂದರು. 10 ದಿನಗಳಲ್ಲಿ ಗುಣವಾಗುವುದೆಂದು ಬಾಬಾರವರು ಸಬ್ ರಿಜಿಸ್ಟ್ರಾರರಿಗೆ ತಿಳಿಸಿದರು. ಸಬ್ ರಿಜಿಸ್ಟ್ರಾರರು ಆ ಗುಳ್ಳೆಯನ್ನು ಸ್ಪೃಶಿಸಿ, ಅದಕ್ಕೆ 'ಉಧಿ' ಯನ್ನು ಲೇಪಿಸಲು ಕೊಟ್ಟು ಕಳುಹಿಸಿದರು ರೆಡ್ಡಿಯವರಿಗೆ ಅವರ ಕಷ್ಟವು ನಿವಾರಣೆಯಾಯಿತು. ಸಬ್ ರಿಜಿಸ್ಟ್ರಾರರು ಒಂದುದಿನ ಆ ಭಾಗದಲ್ಲಿ ನೋವಿನಿಂದ ನರಳಿದರು.

4. ಪೆನುಕೊಂಡದ ರಾಮಪ್ಪನೆಂಬ ಚಿಪ್ಪಿಗನು ಪಾರ್ಶ್ವ ಶಿರೋವೇದನೆಯಿಂದ ನರಳುತ್ತಿದ್ದನು. ಮೇಲ್ಕಂಡ ರೀತಿಯಲ್ಲಿಯೇ ಈತನ ವ್ಯಾಧಿಯೂ ನಿವಾರಣೆಯಾಯಿತು. ಸಬ್ ರಿಜಿಸ್ಟ್ರಾರರು ಸ್ವಲ್ಪ ಕಾಲ ಈ ವೇದನೆಯಿಂದ ನರಳಬೇಕಾಯಿತು.

5. ಸೋವಂದಪಲ್ಲಿ ವಾಸಸ್ಥರಾದ ರಾಮಿರೆಡ್ಡಿ ಎಂಬುವರು ಮೂತ್ರಾಶಯದ ವ್ಯಾಧಿಯಿಂದ ನರಳುತ್ತಿದ್ದರು ಮೂರು ಗುರುವಾರಗಳು ಅವರು ಬಾಬಾರವರ ಪೂಜೆಯು ಕಾಲಕ್ಷೇಪ ಬಂದಿದ್ದರು. ಮೊದಲನೆಯ ವಾರದಲ್ಲಿಯೇ ಅವರ ವ್ಯಾಧಿಯು ಪೂರ್ಣವಾಗಿ ಗುಣವಾಯಿತು.

6. ಮದನಪಲ್ಲಿ ಮುತ್ಯಾಲಮ್ಮ ನೆಂಬಾಕೆಯು ಸಬ್ ರಿಜಿಸ್ಟ್ರಾರ್ರಲ್ಲಿಗೆ 10–6–41 ರಲ್ಲಿ ಒಂದು ಆಕೆಯ ಪತಿಯ ನಯನವ್ಯಾಧಿಯನ್ನು ತಿಳಿಸಿದಳು. ಆಕೆಯ ಪತಿಯು ಬೆಂಗಳೂರಿಗೆ ಚಿಕಿತ್ಸೆಗೆ ಹೋಗುವದು ಅಗತ್ಯವೆಂದು ಹೇಳುತ್ತಿದ್ದರು. ಸಬ್ ರಿಜಿಸ್ಟ್ರಾರರ ಹಸ್ತಸ್ಪರ್ಶ ಮತ್ತು 'ಉಧಿ' ಯು ವ್ಯಾಧಿಯನ್ನು ಗುಣಪಡಿಸಿದವು.

ಂ ಂ

ಇನ್ನೂ ಅನೇಕರು ಈ ಬಗೆಯಲ್ಲಿ ಸಬ್ ರಿಜಿಸ್ಟ್ರಾರವರ ಮೂಲಕ ಬಾಬಾರವರ ಕೃಪೆಗೆ ಪಾತ್ರರಾಗಿರುವರು.

ಂ ಂ

'ಉಧಿ' ಯನ್ನು ಹಚ್ಚಿಕೊಳ್ಳುವದರಿಂದಲೇ ಒಂದು ಬಗೆಯ ದೈವೀಕಶಕ್ತಿಯು ಉದಯಿಸುವದು. ಶ್ರೀ ಬಾಬಾರವರು ತಮ್ಮ ಶಿಷ್ಯರಾದ ಸಬ್ ರಿಜಿಸ್ಟ್ರಾರ್ರವರು ಜನಸಮುದಾಯಕ್ಕೆ ಹೆಚ್ಚು ಉಪಕಾರಮಾಡಲಿಕ್ಕಾಗಿ ತಮ್ಮ ಸಂಪೂರ್ಣಾನುಗ್ರಹವನ್ನು ಅವರಿಗೆ ಪ್ರತಿಪಾದಿಸುವಂಥವರಾಗಲಿ.

ಎಸ್. ಸುಬ್ಬರಾ, ಪ್ಲೀಡರ್

[ಮಹನೀಯರ ಮಹಿಮೆಯು ಅವರ್ಣನೀಯವು. ಶ್ರೀ ಬಾಬಾರವರ ಅನುಗ್ರಹವನ್ನು ಪಡೆದಿರುವವರ ಸಂಖ್ಯೆಯು ಬೊಂಬಾಯಿ ಪ್ರಾಂತ್ಯದಲ್ಲಿಯೂ, ಮದರಾಸು ಕರ್ನಾಟಕ ಪ್ರಾಂತ್ಯದಲ್ಲಿಯೂ ಹೆಚ್ಚಾಗಿರುತ್ತದೆ ನಿತ್ಯಮುಕ್ತರಾದ ಮಹನೀಯರು ಶರೀರವನ್ನು ತ್ಯಜಿಸಿದ್ದರೂ ಶರೀರಧಾರಣೆ ಮಾಡಿದ್ದಾಗ ಜನರಿಗೆ ಎಷ್ಟು ಉಪಕಾರಿಗಳಾಗಿರುತ್ತಿದ್ದರೋ ಅದಕ್ಕಿಂತ ಹೆಚ್ಚು ಉಪಕಾರವನ್ನು ಶರೀರತ್ಯಾಗಾನಂತರ ಮಾಡುವವರಾಗಿರುತ್ತಾರೆ. ಆದುದರಿಂದ ಜನಸಮುದಾಯದಲ್ಲಿ ಯಾರಾರು ಯಾವುದಾವ ಬಯಕೆಯನ್ನುಳ್ಳವರಾಗಿರುವರೊ ಆ ಬಯಕೆಯನ್ನು ಈಡೇರಿಸಿಕೊಳ್ಳಲು ಸಬ್ ರಿಜಿಸ್ಟ್ರಾರವರನ್ನು ದರ್ಶಿಸಿ ಅಥವಾ ಅವರಿಗೆ ಪತ್ರಬರೆದು ಬಾಬಾರವರ ಅನುಗ್ರಹಕ್ಕೆ ಪಾತ್ರರಾಗುವದುಚಿತವಾಗಿರುತ್ತದೆ. ಸಂ. ಸ.]

ಈ ವಾರದ ಭವಿಷ್ಯ

ಮೇಷ

ಶರೀರಾರೋಗ್ಯ ಕೆಟ್ಟೀತು. ಜಾಗರೂಕರಾಗಿರಿ. ಆರ್ಥಿಕ ಅಹಿತಣೆ ಕಡಮೆಯಾಗುವುದು. ಅಧಿಕಾರವರ್ಗದಿಂದ ಸ್ವಲ್ಪ ತೊಂದರೆ.

ವೃಷಭ

ಹಣಕಾಸಿನ ತೊಂದರೆಯಾಗುವುದು. ಸ್ವಪ್ರಜನರ ಸಹಾಯದಿಂದ ನೌಕರಿ ಉದ್ಯೋಗದಲ್ಲಿ ಯಶಸ್ಸು.

ಮಿಥುನ

ಯತ್ನಕಾರ್ಯಸಿದ್ಧಿ, ಧನಾಗಮನ, ಕೀರ್ತಿ, ಯಶಸ್ಸು, ಹೊಸ ಹೊಸ ಕಾರ್ಯಗಳಲ್ಲಿ ಕೈ ಹಾಕುವಿರಿ.

ಕರ್ಕಾಟಕ

ಮನಸ್ಸಿನಲ್ಲಿ ಶಾಂತತೆ ಕಡಮೆ. ಒಂದಲ್ಲೊಂದು ತಾಪತ್ರಯ. ಸ್ವಲ್ಪ ಹಣಕಾಸು ಸಿಗುವುದು.

ಸಿಂಹ

ಈ ವಾರವೂ ಸ್ವಲ್ಪ ಅನಾನುಕೂಲವಾಗಿಯೇ ಇರುತ್ತೆ. ಕೆಲಸಕಾರ್ಯಗಳು ಮುಂದುವರಿಯುತ್ತವೆ. ಆರ್ಥಿಕಸ್ಥಿತಿಗೆ ಸ್ವಲ್ಪ ಬಿಕ್ಕಟ್ಟು.

ಕನ್ಯಾ

ಅನುಕೂಲಗಳೊದಗುವುವು. ಹಣ ಸಿಕ್ಕಿ, ಬಂಧುಮಿತ್ರರ ಸಹಾಯ ಒದಗಿ, ಮಾನ ಸನ್ಮಾನ ದೊರೆಯುವುದು

ತುಲಾ

ಸ್ಥಿತಿಗತಿಗಳು ಉತ್ತಮಗೊಳ್ಳುವುವು. ಜನರಲ್ಲಿ ಸಹಾಯ ಸಹಾನುಭೂತಿ ದೊರಕುವುದು. ದುಡ್ಡಿನ ಮುಖವನ್ನು ತಕ್ಕಮಟ್ಟಿಗೆ ನೋಡುತ್ತೀರಿ.

ವೃಶ್ಚಿಕ

ಮಧ್ಯಮ ಫಲ. ನಿಮ್ಮ ಮೇಲೆ ಜವಾಬ್ದಾರಿ ಕೆಲಸಗಳು ಬೀಳುವುವು. ಜಾಗರೂಕತೆಯಿಂದ ವರ್ತಿಸಿ.

ಧನು

ದೇಹಾರೋಗ್ಯ ಸ್ವಲ್ಪ ಕೆಡಬಹುದು. ಬಾಕಿ ವಿಷಯಗಳಲ್ಲಿ ಅನುಕೂಲವಾಗಿದೆ.

ಮಕರ

ಕಷ್ಟಗಳು ಪರಿಹಾರವಾಗುವುವು. ಪ್ರತಿಸ್ಪರ್ಧಿಗಳು ಮಿತ್ರರಾಗುವರು. ಯತ್ನಕಾರ್ಯಗಳು ಸಿದ್ಧಿಸುವುವು.

ಕುಂಭ

ಮಧ್ಯಮ ಫಲ. ಅನಾನುಕೂಲಗಳಿಗಿಂತ ಅನುಕೂಲಗಳೇ ಹೆಚ್ಚಾಗಿವೆ.

ಮೀನ

ಮಧ್ಯಮ ಫೆಲ. ಅನುಕೂಲಗಳು ಕಡಮೆ. ಆದರೂ ಆತಂಕವಿಲ್ಲದೆ ಕೆಲಸಕಾರ್ಯಗಳು ನಡೆಯುತ್ತವೆ.

ಸುಲಭ ಚಿಕಿತ್ಸೆ

ಲೇಖಕರು—
ಪಂಡಿತ ಲಕ್ಷ್ಮೀನಾರಾಯಣಶಾಸ್ತ್ರಿಗಳು

——

ಉನ್ಮಾದಕ್ಕೆ— ಸರಸ್ವತೀ (ಬೆಂದಿಲಗದ ಸೊಪ್ಪು) ರಸ ಅರ್ಧ ಪಾವು, ಹಸುವಿನತುಪ್ಪ ಅರ್ಧಪಾವು, ಇವನ್ನು ಬೆರೆಸಿ, 3 ದಿವಸ ಬೆಳಿಗ್ಗೆ ಸೇವಿಸುವದು. ತುಪ್ಪ ಅನ್ನ ಪಥ್ಯ ; ಹುಚ್ಚು ಇಳಿಯುವದು.

ರಕ್ತಪ್ರದರ ಮತ್ತು ಶ್ವೇತಪ್ರದರಕ್ಕೆ (ಬಿಳಿಸೀರೆ ಮತ್ತು ಕೆಂಪು ಸೀರೆ ರೋಗಕ್ಕೆ— ನೀರುಗೋಣಿಸೊಪ್ಪನ್ನು ಒಂದು ಹಿಡಿಯಷ್ಟು ನುಣ್ಣಗೆ ಅರೆದು ಅದಕ್ಕೆ ಪಟಿಕ ಅರಳುಮಾಡಿದ ಪುಡಿ ಒಂದು ಕಾಸು ತೂಕ, ಕರ್ಪೂರ ಶಿಲಾಜತು ಭಸ್ಮ ಅಡ್ಡ ತೂಕ ಮಿಶ್ರಮಾಡಿ, ಅರೆಗಡೆದ ಮಿಜ್ಜಿಗೆಯಲ್ಲಿ ಕದಡಿ ಕುಡಿಸಬೇಕು. ಮಜ್ಜಿಗೆ ಅನ್ನ ಪಥ್ಯ, ಉಪ್ಪು ಕಾರ ಸೇವಿಸಬಾರದು.

ಹೊಟ್ಟೇ ಒಳಗಿನ ಮೇಹವ್ರಣಕ್ಕೆ ಮಸ್ತಕೀನವನೀತ— ಒಂದು ತೋಲ ರುಮಾಮಸ್ತಿಕ ಪುಡಿಯನ್ನು ಒಂದು ಸೇರು ಹಸುವಿನ ಬೆಣ್ಣೆಯಲ್ಲಿ ಕಲಿಸಿ, ಇಟ್ಟಿದ್ದ ನಂತರ ಬೆಳಿಗ್ಗೆ ಒಂದು ಕಲಾಯದ ಜೋಗುಣಿಯಲ್ಲಿ ಮುಕ್ಕಾಲುಪಾಲು ನೀರುಹಾಕಿ ಎರಡು ಕೈಯಲ್ಲಿಯೂ ಜನ್ನಾಗಿ ಉಜ್ಜುವುದು. ನಂತರ ಆ ನೀರನ್ನು ಚೆಲ್ಲಿ ಬೇರೆ ನೀರಿನಲ್ಲಿ ಮೇಲ್ಕಂಡಂತೆ ಉಜ್ಜಿ ತೊಳೆಯುವದು. ಈ ರೀತಿ 12 ಸಲ ಮಾಡಿ ಆ ಬೆಣ್ಣೆಯನ್ನು 7 ಉಂಡೆಗಳಾಗಿ ಮಾಡಿ ದಿನಕ್ಕೆ ಒಂದು ಉಂಡೆಯಂತೆ 7 ದಿನಗಳು ಸೇವಿಸುವುದು. ಸಿಹಿಸಂಡು ಅನ್ನ ಪಥ್ಯ. 7 ದಿನಗಳ ನಂತರ 3 ದಿನ ಮಜ್ಜಿಗೆ ಪಥ್ಯ. ಇದರಿಂದ ಹೊಟ್ಟೆ ಒಳಗಿನಸ್ತ್ರೀಮೇಹದವ್ರಣವೆಲ್ಲಾ ಗುಣವಾಗುತ್ತೆ.

ಮೂತ್ರಾಶಯ ಶುದ್ಧಿಗೆ— ಎಳ್ಳಹರಿವೆ ಸೊಪ್ಪನ್ನು ಸಮೂಲವಾಗಿ ತಂದು ಕುಟ್ಟಿ ಅದರ ರಸವನ್ನು ಸುಮಾರು ನಾಲ್ಕು ತೊಲದಷ್ಟು ಒಂದು ಕಾಸು ತೂಕ ಪೆಟ್ಲುಪ್ಪು ಪುಡಿ ಸೇರಿಸಿ ಸೇವಿಸುವುದು ಚೆನ್ನಾಗಿ ಜಲಬಾಧೆಯಾಗಿ ಶುದ್ಧಿಯಾಗುತ್ತೆ.

ಬಹುಮೂತ್ರಕ್ಕೆ—ಹೊನಗೊನ್ನೇ ಸೊಪ್ಪಿನರಸ ಒಂದು ವಳಲೆಯಷ್ಟನ್ನು ಅಡಿನ ಹಾಲಿನಲ್ಲಿ ಸೇವಿಸುವದು.

——

ಮಿ|| ಅಮೆರಿಯವರನ್ನು ಕುರಿತು ಮಹಾತ್ಮರ ಹೇಳಿಕೆ

ಮಿ|| ಅಮೆರಿಯವರ ಮೆಂಚೆಸ್ಟರಿನ ಭಾಷಣದಲ್ಲಿ ಹೊಸದೇನೂ ಇಲ್ಲ; ಹಾಗಾಗಿ ಅದರಿಂದ ಬ್ರಿಟನ್ನಿಗಾಗಲೀ, ಭಾರತಕ್ಕಾಗಲೀ ಲಾಭವಿಲ್ಲ. ಅವರ ಅದೇ ಅಸತ್ಯಗಳು, ಎಷ್ಟು ಬಾರಿ ಉಚ್ಚರಿಸಲ್ಪಟ್ಟರೂ ಅದು ಸತ್ಯವಾಗಲಾರದು, ಎಂದು ಗಾಂಧಿಜಿಯವರು ಒಬ್ಬ ಪತ್ರಿಕಾ ಪ್ರತಿನಿಧಿಗೆ ತಿಳಿಸಿರುವರು. (ಕಂ)

ಮೆಂಬರರಿಗೆ ಬಂಗಲೆಗಳು!

ವೈಸ್ರಾಯ್ ಕೌನ್ಸಿಲ್ಲಿನ ಹೊಸ ಮೆಂಬರರಿಗೆ ಡಿಲ್ಲಿಯಲ್ಲಿ ಹೊಸ ಬಂಗಲೆಗಳು ಆಗುತ್ತಿವೆ. ಹಾಗೆ ನಾಲ್ಕು ಹೊಸ ಬಂಗಲೆಗಳು— ಪ್ರತಿಯೊಂದಕ್ಕೆ ಖರ್ಚು ಹೆಚ್ಚಿಲ್ಲ, ಬಂದೂವರೆ ಲಕ್ಷ ಮಾತ್ರ! ನಿಜವಾಗಿಯೂ ಅಂದು ಹೊಸ ಡಿಲ್ಲಿ ಪ್ಲಾನ್ ಮಾಡಿದವರು, ವೈಸರಾಯರ ಕೌನ್ಸಿಲ್ಲಿನ ಹಳೆಯ ಮೆಂಬರರ ಮಂದಿರಗಳ ಬಳಿಯಲ್ಲೇ. ಹೊಸ ಮೆಂಬರರ ಒಂಗಎಗಳನ್ನೂ ನಂದೆ ಕಟ್ಟಬೇಕಾದ ಸಂಭವ ಬಂದಿತೆಂದು ದೂರದೃಷ್ಟಿಯಿಂದ ಊಹಿಸಿ, ಅಲ್ಲೆಲ್ಲ ಈ ಹೊಸ ಬಂಗಲೆಗಳಿಗಾಗಿ ಖಾಲಿ ಜಾಗವನ್ನು ಬಿಟ್ಟುದುದೀಗ ಎಷ್ಟು ಉಪಕಾರವಾಯಿತು! ಹೀಗೇ ಸಿವ್ಹಾದಲ್ಲಿಯೂ ಹೊಸ ವಸತಿಗಳ ಆವಶ್ಯಕತೆಯುಂಟಾಗಿ, ಆ ಸಂಬಂಧದ ಅಂದಾಜಿಗಾಗಿ ಏರ್ಪಟ್ಟ ಅಧಿಕಾರಿಗಳು, ಆಪಕ್ಕಾಗಿ ೨೦ ಲಕ್ಷ ರೂಪಾಯಿಗಳು ಜೇಕಂದೂ ಆಗಲೇ ತಮ್ಮ ವರದಿಯೊಪ್ಪಿಸಿದ್ದಾರೆ ಸರಿ! ಇನ್ನು ಭಾರತದ ತೆರಿಗೆದಾರರು ಏನೆಂದುಕೊಂಡಿರೇನು? ವೈಸ್ರಾಯ್ ಕೌನ್ಸಿಲಿನ ಹೊಸ ಮೆಂಬರರ ವಾಸಗೃಹಗಳ ಸಮಸ್ಯೆಯೊಂದು ಒನ್ಮೆಗೆ ಮುಗಿದಂತಾಗಲಿಲ್ಲವೇ?

—— (ಕಂ)

ಜಪಾನಿನ ದುರಾಶೆ

ಚೈನಾದಲ್ಲಿ ಜಪಾನು ಯುದ್ಧವನ್ನು ಸಾಕ್ಷಮಾಡಬೇಕೆಂಬುದು ಅಮೆರಿಕದ ಕೋರಿಕೆ. ಜಪಾನಿಗಾದರೋ ಚೈನಾನು ಬೇಕು, ಥೈಲೆಂಡೂ ಬೇಕು ಎಲ್ಲಾ ಬೇಕು, ಸರ್ವಂ ಭಕ್ಷ ಯಾಮಿ ನಾಗರಂ ಭಕ್ಷಯಾಮಿ ಎಂಬ ಕೋರಿಕೆಯಿನ್ನುಳ್ಳದಾಗಿದೆ.

——

ಭೂಕಂಪ

ಲಾಸ್ ಆಂಜಿಲಿಸ್‌ನಲ್ಲಿ ಮಹಾ ಭೂಕಂಪವಾದುದರಿಂದ ೧೦ ಲಕ್ಷ ಡಾಲರುಗಳ ನಷ್ಟವು ಸಂಭವಿಸಿದೆ.

ಶ್ರೀ ವಿದ್ಯಾರಣ್ಯ ಫಜಲ್ ನಂ. ೩

(ಮುಕ್ತಾಯದ ದಿನ 16-12-41)

ಎಡದಿಂದ ಬಲಕ್ಕೆ—ವಿದ್ಯಾರಣ. 4 ಅಂಸ, 5 ವಂರಸೆಲಿ. 7 ಅಸಂರ. 9 ತಂತ್ರ. ಯಂತ್ರ. 11 ಸಿಹಿ. ಚಿಹಿ. 14 ಪವಿ. 17 ಯತಿ, ಟಕ್ಕ. 18 ಕಾರಾಗೃಹ. 19 ಅಗಾರ.

ಮೇಲಿಂದ ಕೆಳಕ್ಕೆ—1 ವಿಷಯ, ವಿವಾದ, ವಿವಾಸ. 2 ರವಣಿ, 3 ಣ್ಯರ ಅ. 6 ಗಾಯ, ಭಯ, ವ್ಯಯ. 8 ರಂಭೆ. 10 ಅಪಕಾರಿ, ಉಪಕಾರಿ. 12 ಗಾಳಿ, ಧಾಳಿ, ಧೂಳಿ. 13 ಮಾಯಗಾರ, ಮಾಟಕಾರ. 15 ವಿರಾಗಿ, ವಿರಕ್ತ. 16 ದೇಹ, ಜಹ. 19 ಆನೆ.

'Vernon & Irene Castle'

Vernon Castle (Fred Astair) Lre Fields stooge meets Irene Foote (Ginger Rogers) a dance-mad girl and walter (Walter Brennam) the Foote servant of at New Rochelle where Irene lives. Irene had been led to believe that Vernon is a dancer and with the impression, goes to New York with several girl friends to see his act in " The Henpecks " Humiliated when they see his slapstick antics she borates Vernon for wasting his talents.

Later, Vernon admits that Irene is right and wants to dance with her as his partner. The rehearse through the winter, and after months of hard work a dance team is formed, efficient, entertaining—and married.

Fields wont hire them as dancers, but when he sells french rights to " The Henpecks " The Castles are engaged. In Paris, Vernon learns that he is not to dance with Irene but lo play his Original stapstick role, and he refuses to go on.

In their sparsely furnished apartment, Vernon attempting to cheer up Irene, coaxes her to dance. To avoid disturbing the tenant below, they dance on their toes (Castle Walk) As they finish the routine they are applouded by Maggie Sutton (Edna Mary Oliver), their downslairs tenant and a theatrical agent. She gets Vernon and Irene an engagement at the Cafe de pairs. Their successess is phenominal. Before long they are international toasts, Clothes, cigarettes, books, and novelties are named after them. The whole world takes up the castle waltz, the Castle walk and other famous Castle steps. Maggie as their gent and Walter as their faithful aid are always in attendance.

Now Vermon and Irene want to retire, although they are still so young. On the night of their farewell appearance, the World War breaks out. Vernon, being British, wants to enlist and soon after, appearing with members of a British regiment in a Benefit show in New York City is inspired to join the Royal Flying Corps.

Vermon sails for England, accompained by walter, white Irene remains in New York. After two hectic years ; at the front, Vermon meets Irene in thair old Paris apartment ; that night the United Statas enters the conflict

Irene returning to America and interests herself in motion pictures in Hollywood. Some time later, Vermon is tranferred to Fort Worth, Texes, airport to teach American students and arrenges to meet Irene. Arriving before her, Vernon goes to toe hotel and hires a suite garden ballroon and an orchestra just for them. Suddenly, he is ordered back to the airport for manoeuvers. In flight, Vernon purposely crashes his plane to avoid a mid-air collision and saves his student flyer's life. It is the devoted Walter who brings the news of Vernon's death to Irene at the hotel.

ಹಿಂದುಸ್ಥಾನದ



ಶುದ್ಧ ಗಂಧದ ಸಾಬೂನು
ಮೈಸೂರ್
ಸ್ಯಾಂಡಲ್‌ಸೋಪ್

ಗವರ್ನಮೆಂಟು ಸೋಪ್ ಫ್ಯಾಕ್ಟರಿ, ಬೆಂಗಳೂರು

For Luscious Menu and
Fine Coffee and Tea
Sastry's Coffee Rooms
Chamarajapuram, Mysore

Edited, Printed & published by M.S. Krishna Rao, at the Satyavadi Press, Chamaraja Agrahar, Mysore

Consult us for all your Printing needs
The Satyavadi Press
Chamarajpuram, Mysore

The Headmaster, Dandinasivara writes —

" Your gentlemanly way oi dealing with your customers is highly commendable. Thank you very much for your goodness "

" I am glad to inform you that the question papers were nicely printed "

.....

Wanted

A gentleman or a lady well-versed in the English language and capable of writing analytical, exhaustive and searhing comments, to I. W. and other X-Words and make adequate selections of words apt to the clues. Appjy in writing, stating minimun monthly remneration needed. The selected candidate need not attend the Office, and may be sending the matters, as per instructions.

" Victory " c/o Satya Stores
Jaganmohan Palace Road, Mysore.